INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -2, March--April, 2025,
PageNo,57- 69
Peer -Reviewed, Refereed Journal

# ಗಾಂಧೀಜಿ ಅವರ ವ್ಯಕ್ತಿತ್ವ ವಿಕಾಸದಲ್ಲಿ ಪ್ರಭಾವ ಬೀರಿದ ವ್ಯಕ್ತಿಗಳು ಮತ್ತು ಚಾರಿತ್ರಿಕ ಅಂಶಗಳು

**ಡಾ.ಜಯಣ್ಣ.ಬಿ.ಆರ್.**[1]

**ಗಾ**ಂಧೀಜಿ ಅವರು ಒಬ್ಬ ವಿಶ್ವಶ್ರೇಷ್ಠ ದಾರ್ಶನಿಕರು. ಬಹುಮುಖ್ಯವಾಗಿ ಗಾಂಧೀಜಿ ಅವರು ಭಾರತೀಯ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಅಹಿಂಸಾತ್ಮಕ ಹೋರಾಟದ ಪ್ರಧಾನ ಸೇನಾನಿಯಾಗಿದ್ದವರು. ಇವರು ಮಾನವ ನಿರ್ಮಿತ ಸಮಾಜದಲ್ಲಿದ್ದ ಆಚರಣೆಯ ಉಪಾಸನೆಗಳಿಂದಲೂ ಸಂಪೂರ್ಣವಾಗಿ ಮುಕ್ತವಾಗಿರುವ ನೈತಿಕತೆಯನ್ನು ಆಧರಿಸಿದ ಸ್ವ-ಧರ್ಮದ ಅನುಷ್ಠಾನವನ್ನು ಪ್ರಬಲವಾಗಿ ಪ್ರತಿಪಾದಿಸಿದವರು. ಆ ಮೂಲಕ ಸರ್ವಧರ್ಮಗಳ ವಿಶ್ವಮೌಲ್ಯಗಳನ್ನು ಮನಗಂಡ ವಿಶ್ವ ಕುಟುಂಬಿಯಾದವರು ಗಾಂಧೀಜಿ. ಗಾಂಧೀಜಿ ಅವರು ಆರ್ಥಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕದಂತಹ ಸದ್ಗುಣ ಉದಾತ್ತ ವಿಚಾರಧಾರೆಗಳ ಸಮಗ್ರತೆಯ ಸಮನ್ವಯದ ಮೂಲಕ ಐಹಿಕ ಪಾರಮಾರ್ಥಿಕಗಳ ಸಾಧಿಸಿದ ಸಮನ್ವತೆಯ ಅಗ್ರಮಾನ್ಯರು; ಗ್ರಾಮೀಣ ಸಮಾಜದ ಶೋಷಿತ ಮತ್ತು ಬಡವರ ಏಳ್ಗೆಗಾಗಿಯೇ ವಿಶ್ವಶಾಂತಿಯ ಮೂಲಕ ಲೋಕ ಕಲ್ಯಾಣವನ್ನು ಸಾಧಿಸಿ ಮಹಾನ್ ಮಾನವತಾವಾದಿಯದವರು. ಪ್ರಭುತ್ವ ನಿರಸನವಾದ, ಸಮಾಜವಾದ ಹಾಗೂ ಲೌಕಿಕವಾದಗಳನ್ನು ಒಟ್ಟಾಗಿ ಬೆಸೆದು ಸರ್ವೋದಯ ಸಮಾಜದ ನಿರ್ಮಾಣಕ್ಕಾಗಿ ಪ್ರತಿಪಾದಿಸಿದವರು.

ಗಾಂಧೀಜಿ ಅವರ ವ್ಯಕ್ತಿತ್ವದ ಮೇಲೆ ಅನೇಕ ವ್ಯಕ್ತಿಗಳು, ಅವರ ಕೃತಿಗಳು ಮತ್ತು ಅನೇಕ ಚಾರಿತ್ರಿಕ ಅಂಶಗಳು ಪ್ರಭಾವಿಸಿರುತ್ತವೆ. ಇಬ್ಬರು ಭಾರತೀಯ ಮಹಾನ್ ವಿದ್ವಾಂಸರಾದ ದಾದಾಭಾಯಿ ನವರೋಜಿ ಮತ್ತು ಆರ್.ಸಿ.ದತ್ ಅವರಿಂದ ಆಧುನಿಕ ಅರ್ಥಶಾಸ್ತ್ರ ಮತ್ತು ಆರ್ಥಿಕ ವ್ಯವಸ್ಥೆಯ ಕೆಲವು ಮೂಲಭೂತ ಸಮಸ್ಯೆಗಳನ್ನು ಗಾಂಧೀಜಿ ಅವರು ಅರ್ಥಮಾಡಿಕೊಂಡರು. ಈ ಬಗೆಯಲ್ಲಿ ಗಾಂಧೀಜಿ ಅವರು ಅಧ್ಯಯನ ಮಾಡಿರುವ ಗ್ರಂಥಗಳೆಂದರೆ; ದಾದಾಬಾಯಿ ನವರೋಜಿ ಅವರ ಕಂತಜಡಿಣಥಿ ಚಿಟಿಜ ಗಟಿ–ಃಡಿiಣish ಖಣಟಜ ಎಟಿ ಋಟಿಜಜಚಿ ಮತ್ತು ಆರ್.ಸಿ.ದತ್ ಅವರ ಇಛಿಂಟಿಂಟುಛಿ ಊiಣಂಡಿಥಿ ಂಜಿ ಋಟಿಜಜಚಿ. ಗಾಂಧೀಜಿ ಅವರು ತಮ್ಮ ಆರ್ಥಿಕ ಚಿಂತನೆಗಳನ್ನು ವಿಶೇಷವಾಗಿ ಭಾರತಕ್ಕಾಗಿ ಅಭಿವೃದ್ಧಿಪಡಿಸಿದರು.

---

[1].ಸಹ ಪ್ರಾಧ್ಯಾಪಕರು,ಇತಿಹಾಸ ವಿಭಾಗ,ಸರ್ಕಾರಿ.ಮಹಿಳಾ.ಪ್ರಥಮ,ದರ್ಜೆ,ಕಾಲೇಜು,ಚಾಮರಾಜನಗರ.

ಗಾಂಧೀಜಿ ಅವರ ಪ್ರಕಾರ, ಅವರು ಯಾವುದೇ ಒಬ್ಬ ಸಿದ್ಧಾಂತವಾದಿಯಾಗಿರಲಿಲ್ಲ. ಆದರೆ, ಭಾರತೀಯ ಆರ್ಥಿಕ ವ್ಯವಸ್ಥೆಯು ನಿರ್ದಿಷ್ಟ ರೀತಿಯಲ್ಲಿ ವಿಕಸನಗೊಳ್ಳಬೇಕೆಂದು ಅವರು ಬಯಸಿದ್ದರು. ಭಾರತದಲ್ಲಿನ ಬಡತನ ಮತ್ತು ಆರ್ಥಿಕ ಚರಿತ್ರೆಯನ್ನು ಚಿತ್ರಿಸಿರುವ ರಮೇಶ್ ಚಂದ್ರ ದತ್ ಹಾಗೂ ದಾದಾಭಾಯಿ ನವರೋಜಿ ಅವರ ಕೃತಿಗಳ ಅಧ್ಯಯನ ಮಾಡಿರುವ ಗಾಂಧೀಜಿ ಅವರಿಗೆ ಆರ್ಥಿಕ ಸ್ಥಿತಿಯೊಂದಿಗಿನ ಮನಃಸ್ಥಿತಿಯೂ ಬದಲಾವಣೆಯಾಯಿತು. ಗಾಂಧೀಜಿ ಅವರನ್ನು ಇವೆರಡೂ ಕೃತಿಗಳು ಹೆಚ್ಚು ಕಾಡಿದವು. ಅದೇ ರೀತಿಯಲ್ಲಿ ರಷ್ಯಾದ ಲಿಯೋ ಟಾಲ್‌ಸ್ಟಾಯ್ ಮತ್ತು ಇಂಗ್ಲೆಂಡಿನ ಜಾನ್ ರಸ್ಕಿನ್ ಅವರ ಸೂಕ್ಷ್ಮತೆ ಮತ್ತು ಆಲೋಚನಾ ವಿಧಾನಗಳು ಗಾಂಧೀಜಿ ಅವರ ವ್ಯಕ್ತಿದ ಮೇಲೆ ಅಪಾರವಾಗಿಯೇ ಪ್ರಭಾವಿಸಿರುತ್ತವೆ.

ಮುಂದುವರೆದು ಭಗವಂತನ ಸಾಮ್ರಾಜ್ಯ ನಿನ್ನಲ್ಲಿಯೇ ಇದೆ' (The Kingdom of God is Within You), 'ಮರಳಿ ನಿಸರ್ಗಕ್ಕೆ' (Back to Nature) ಎಂದು ಕರೆಕೊಟ್ಟಿದ್ದ ಹೆನ್ರಿ ಥೋರೋ, "Civil Disobidience and Tried to Develop the Techniques of Non-Violent Resistance to the Wrongful and Unjust Deeds", ಅಂತೋದಯ (Unto this Last), ಜಾನ್ ರಸ್ಕೀನ್, ವೇದಗಳು, ರಾಮಾಯಣ, ಮಹಾಭಾರತ, ಭಗವದ್ಗೀತೆ, ಬೈಬಲ್, ಕುರಾನ್, ಮಹಾಗುರು ಬುದ್ಧರ ಸಂದೇಶ, ಜೈನಗುರು ಬೇಜಾರ್ಜಿ ಸ್ವಾಮಿ ಅವರ ಪತ್ರಗಳ ಸಾರ ಸಂದೇಶಗಳು ಗಾಂಧೀಜಿ ಅವರ ಮೇಲೆ ಅಪಾರವಾದ ಪ್ರಭಾವವನ್ನು ಬೀರಿದ್ದವು.

ಕರ್ಮಸಿದ್ಧಾಂತದ ಮೂಲ ತಿರುಳನ್ನು ಗೀತೆಯಿಂದಲೂ, ವಿಶ್ವಭ್ರಾತೃತ್ವವನ್ನು ಕುರಾನ್‌ನಿಂದಲೂ, ಪ್ರೇಮಮಯೀ ತತ್ವಗಳನ್ನು ಬೈಬಲ್‌ನಿಂದಲೂ, ಲೋಕಹಿತ ಅರ್ಥಶಾಸ್ತ್ರದ ತತ್ವವನ್ನು ಜಾನ್ ರಸ್ಕೀನ್ ಅವರಿಂದಲೂ, ಸತ್ಯ, ಶಾಂತಿ ಮತ್ತು ಅಹಿಂಸೆಯನ್ನು ಲಿಯೋ ಟಾಲ್‌ಸ್ಟಾಯ್ ಅವರಿಂದಲೂ ಮತ್ತು ರಾಜನೀತಿ ವಿಚಾರಗಳ ಮಾರ್ಗದರ್ಶನವಾಗಿ ಗೋಖಲೆ ಅವರಿಂದಲೂ ಗಾಂಧೀಜಿ ಅವರು ಹೆಚ್ಚು ಪ್ರಭಾವಿತರಾಗಿರುವುದು ಕಂಡುಬರುತ್ತದೆ.

ಗಾಂಧೀಜಿ ಅವರ ವ್ಯಕ್ತಿತ್ವ ವಿಕಾಸದಲ್ಲಿ ಪ್ರಭಾವ ಬೀರಿದ ವ್ಯಕ್ತಿಗಳು ಮತ್ತು ಚಾರಿತ್ರಿಕ ಅಂಶಗಳನ್ನು ಈ ಮುಂದಿನಂತೆ ಸಾದರಪಡಿಸಲಾಗಿದೆ.

**ಮಾತೆ ಪುತಲಿಬಾಯಿ** – ಗಾಂಧೀಜಿ ಅವರ ತಾಯಿ ಪುತಳಿಬಾಯಿ ಅವರು ಮೊದಲಿಗೆ ಪ್ರಭಾವಿಸಿದವರು. ಇವರು ದೇವರು ಮತ್ತು ಧರ್ಮದ ಕುರಿತು ಪುರಾಣ ಹಾಗೂ ಕೀರ್ತನೆಗಳಲ್ಲಿ ಕೇಳಿದ್ದಷ್ಟೇ ಇವರು ಪಡೆದುಕೊಂಡ ಜ್ಞಾನವಾಗಿತ್ತು. ತುಂಬಾ ನಯನಾಜುಕಾದ ಸ್ವಭಾವದವರಾಗಿದ್ದರು. ಕೌಟುಂಬಿಕ ವಿಷಯಗಳ ಕಡೆಗೆ ಯಾವಾಗಲೂ ಚಿಂತನೆ ಮಾಡುತ್ತಿದ್ದರು. ಓದದಿದ್ದರೂ ಸಹ ಕೆಲವೊಂದು ಸಾಮಾಜಿಕ ಅಂಧಶ್ರದ್ಧೆಯಲ್ಲಿ ನಂಬಿಕೆಯುಳ್ಳವರಾಗಿದ್ದರು. ಪ್ರೀತಿ, ತ್ಯಾಗ ಹಾಗೂ

ಕುಷ್ಠರೋಗಿಗಳಿಗೆ ಆರೈಕೆ ಮಾಡುವ ಪರಿಕಲ್ಪನೆಗಳು ಗಾಂಧೀಜಿ ಅವರಿಗೆ ಅವರ ತಾಯಿಯಿಂದ ಬಂದ ಬಳುವಳಿಯಾಗಿದೆ. ಗಾಂಧೀಜಿ ಅವರ ತಂದೆ ಕರಮಚಂದ್ ಗಾಂಧೀ ಅವರು ಕಲಾಭಿಮಾನಿಗಳು, ಸತ್ಯ ನಿಷ್ಠರು, ವಿಶಾಲ ಹೃದಯವುಳ್ಳವರು ಹಾಗೂ ಸ್ವಾಭಿಮಾನಯಾಗಿದ್ದವರು. ಗಾಂಧೀಜಿ ಅವರ ತಂದೆಯವರು ವಿವಿಧ ಧರ್ಮದವರೊಡನೆ ಅವರವರ ಧರ್ಮದ ವಿಚಾರಗಳನ್ನು ಮತ್ತು ಹಿಂದೂ ಪಂಡಿತರೊಡನೆ ರಾಮಾಯಣ, ಮಹಾಭಾರತ, ವೇದಶಾಸ್ತ್ರ, ಪುರಾಣ ಹಾಗೂ ಸ್ಮೃತಿಗಳ ಕುರಿತು ಚರ್ಚೆಗಳು, ಸಂವಾದಗಳು ಮನೆಯಲ್ಲಿ ನಡೆಯುತ್ತಿರುವುದನ್ನು ಸ್ವತಃ ಗಾಂಧೀಜಿ ಅವರು ಕಾಣುತ್ತಿದ್ದರು.

ಶ್ರವಣಕುಮಾರನ ಮಾತಾ–ಪಿತೃ ಭಕ್ತಿಯೂ ಗಾಂಧೀಜಿ ಅವರಿಗೆ ಗಾಢವಾಗಿಯೇ ಪ್ರಭಾವ ಬೀರಿತ್ತು ಎಂಬುದನ್ನು ಸ್ವತಃ ಗಾಂಧೀಜಿ ಅವರೇ ದಾಖಲೀಕರಿಸಿದ್ದಾರೆ. ಹಾಗೆಯೇ ಸತ್ಯ ಹರಿಶ್ಚಂದ್ರ ನಾಟಕದಲ್ಲಿರುವ ಬರುವಂತಹ ಸತ್ಯದ ದರ್ಶನದಿಂದ ಗಾಂಧೀಜಿ ಅವರು ಪ್ರಭಾವಿತಗೊಂಡಿದ್ದಾರೆ. ಇಡೀ ಮಾವನಕುಲವು ಏಕೆ ಸತ್ಯದ ಹಾದಿಯಲ್ಲಿ ನಡೆದು ಸುಖಿಗಳಾಗಿರಬಾರದು ಎಂದು ಚಿಂತಿಸಿದವರು. ಭಾರತೀಯ ಸಂದರ್ಭದ ಸ್ವಾತಂತ್ರ್ಯಕ್ಕಾಗಿ ಹೋರಾಡುವಾಗಲು ಸತ್ಯವನ್ನೇ ದೊಡ್ಡ ಅಸ್ತ್ರವನ್ನಾಗಿ ಮಾಡಿಕೊಂಡು ಬ್ರಿಟೀಷ್‌ರನ್ನು ಭಾರತದಿಂದ ಹೊಡೆದೊಡಿಸುವಲ್ಲಿ ಯಶಸ್ವಿಯಾದರು.

ಶಂಕರಾಚಾರ್ಯರ ಅದ್ವೈತ ತತ್ವ ಸಿದ್ಧಾಂತ, ಗೀತೆ, ವೇದ, ಪುರಾಣ, ಶಾಸ್ತ್ರ, ಸ್ಮೃತಿಗಳ ಮತ್ತು ಧರ್ಮಸೂತ್ರಗಳು ಕೂಡ ಗಾಂಧೀಜಿ ಅವರ ವ್ಯಕ್ತಿತ್ವದ ಮೇಲೆ ಹೆಚ್ಚು ಪ್ರಭಾವಿಸಿವೆ. ಗಾಂಧೀಜಿ ಅವರಿಗೆ ಕೇವಲ ಭಾರತೀಯ ಧರ್ಮಗಳ ಪ್ರಭಾವವು ಅಷ್ಟೇ ಅಲ್ಲದೇ ಏಸುಕ್ರಿಸ್ತನ ಶಿಲುಬೆಗೇರಿಸಿದ ಅನಂತರದ, ಖಜಡಿಟಂಟ ಂಟ ಣುಜ ಒಂಣಟಣ ಬೆಟ್ಟದ ಮೇಲನ ಧರ್ಮೋಪದೇಶಗಳ ಪ್ರಭಾವವು ಬಹಳಷ್ಟಾಗಿದೆ. ಮಹಮ್ಮದ್ ಪೈಗಂಬರ್ ಅವರು ಬೋಧಿಸಿದ ಕುರಾನ್ ಗ್ರಂಥವನ್ನು ತಳಸ್ಪರ್ಶಿಯಾಗಿ ಅಧ್ಯಯನ ಮಾಡಿದವರು. ಸೂಫಿ ಸಂತರ ತತ್ವ–ದರ್ಶನಗಳನ್ನು ಮೆಚ್ಚಿಕೊಂಡಿದ್ದವರು. ಜೈನಧರ್ಮ ಮತ್ತು ಬೌದ್ಧಧಮ್ಮಗಳ ಮೂಲ ತಿರುಳನ್ನು ಅರಿತವರು. ನಿಜವಾದ ಮಾನವನ ಸುಧಾರಣೆ, ಮಾನವನ ಅಂತರಂಗದ ಪರಿವರ್ತನೆಯಿಂದ ಮಾತ್ರ ಸಾಧ್ಯ ಎನ್ನುತ್ತಿದ್ದರು ಗಾಂಧೀಜಿ.

ಗಾಂಧೀಜಿ ಅವರ ತಂದೆಯವರು 'ಶ್ರವಣನ ಪಿತೃಭಕ್ತಿ ನಾಟಕ' ಎಂಬ ಪುಸ್ತಕವನ್ನು ಕೊಂಡಿದ್ದರು. ಈ ನಾಟಕದ ಪುಸ್ತಕವನ್ನು ಅಪಾರ ಆಸಕ್ತಿಯಿಂದಲೇ ಗಾಂಧೀಜಿ ಅವರು ಓದಿ ಆ ಮೂಲಕ ಪ್ರಭಾವಿತರಾದವರು. ಏಕೆಂದರೆ, ಒಂದು ಅಡ್ಡದಲ್ಲಿ ಒಂದು ಕಡೆ ತಾಯಿ, ಮತ್ತೊಂದು ಕಡೆ ತಂದೆ; ಇಬ್ಬರೂ ಕುರುಡರು. ತಂದೆ–ತಾಯಿಗಳಿಗೆ ಮಗ ತೀರ್ಥಯಾತ್ರೆಯನ್ನು ಮಾಡಿಸುವ ಸಲುವಾಗಿ ಈ ಪ್ರಯತ್ನವೂ ನಡೆದಿರುತ್ತದೆ. ಇದು ಗಾಂಧೀಜಿ ಅವರ ಮನಸ್ಸಿನ ಮೇಲೆ ಅಚ್ಚಳಿಯದ ಪರಿಣಾಮ ಉಂಟುಮಾಡಿರುತ್ತದೆ. ಸಣ್ಣ ವಯಸ್ಸಿನ ಗಾಂಧೀಜಿ ಅವರ ಮನಸ್ಸಿನ ಮೇಲೆ ಶ್ರವಣ ಕುಮಾರನ ಸಾವು,

ಯಮಯಾತನೆಗೊಳಗಾದ ತಂದೆ–ತಾಯಿಗಳ ಗೋಳು ಮಾತ್ರ ಅಸಲಾಗದ ಪರಿಣಾಮ ಮುದ್ರೆಯನ್ನೇ ಹಾಕಿದೆ.

ಹರಿಶ್ಚಂದ್ರ ನಾಟಕದಲ್ಲಿ ಸತ್ಯವನ್ನೇ ಪ್ರಧಾನವಾಗಿ ಸಂಕೇತಿಸುತ್ತದೆ. ಆದ್ದರಿಂದಲೇ ಗಾಂಧೀಜಿ ಅವರ ಪಾಲಿಗೆ ಈ ಹರಿಶ್ಚಂದ್ರ ಆದರ್ಶ ಪುರುಷನಾಗಿದ್ದಾನೆ. ಸತ್ಯವೇ ದೇವರೆಂಬ ನಿಮಯಕ್ಕೆ ಬರುವಷ್ಟರ ಮಟ್ಟಿಗೆ ಹರಿಶ್ಚಂದ್ರ ಗಾಂಧೀಜಿ ಅವರ ಮೇಲೆ ಪರಿಣಾಮ ಬೀರಿದ್ದಾನೆ. ಗಾಂಧೀಜಿ ಅವರ ಪಾಲಿಗೆ ಶ್ರವಣಕುಮಾರ ಮತ್ತು ಹರಿಶ್ಚರ ಇಬ್ಬರು ಪ್ರಮುಖವಾಗಿರುವ ಚಿರಂಜೀವಿಗಳು. ಗಾಂಧಿಜಿ ಮತ್ತು ಅವರ ಗೆಳೆಯರು ಅದನ್ನು ನೋಡಿ ಸತ್ಯ ಹಾಗೂ ಕರ್ತವ್ಯಗಳನ್ನು ಅಪಾರವಾದ ನಿಷ್ಠೆಯಿಂದ ಹರಿಶ್ಚಂದ್ರ ರಾಜನ ಕಥೆಯು ಅದರಲ್ಲಿ ಚಿತ್ರಿತವಾಗಿತ್ತು. ಆ ನಾಟಕವು ಗಾಂಧೀಜಿ ಅವರ ಮೇಲೆ ತೀವ್ರ ಪ್ರಭಾವ ಬೀರಿತು. ಇದೇ ಅಲ್ಲದೆ ಅವರು ಸಾಗುವ ದಾರಿಯು ಎಷ್ಟೇ ಕಠಿಣಮಾರ್ಗವಾಗಿದ್ದರೂ ಹರಿಶ್ಚಂದ್ರನಂತೆ ಸತ್ಯವಂತನಾಗಿ ಇರಬೇಕೆಂದು ಗಾಂಧೀಜಿ ಅವರು ಹಂಬಲಿಸುತ್ತಿದ್ದರು ಮತ್ತು ಸತ್ಯ ಮಾರ್ಗದಲ್ಲಿ ನಡೆಯುವ ಪ್ರವೃತ್ತಿಯನ್ನು ರೂಢಿಸಿ ಬೆಳೆಸಿಕೊಂಡರು. ಗಾಂಧೀಜಿ ಅವರು ಸತ್ಯ ಮತ್ತು ಅಹಿಂಸೆಯನ್ನೇ ತಮ್ಮ ಮೂಲ ಮಂತ್ರವಾಗಿಸಿಕೊಂಡವರು.

ಗಾಂಧೀಜಿ ಅವರಿಗೆ ಬಾಲ್ಯದಲ್ಲಿ ಶ್ರವಣಕುಮಾರನ ಮಾತಾಪಿತೃಗಳ ಭಕ್ತಿ ಹಾಗೂ ಸತ್ಯ ಹರಿಶ್ಚಂದ್ರ ನಾಟಕಗಳು ಮುಂದೆದೆ ದಾರಿ ದೀಪವಾದವು. ಸತ್ಯ ಮತ್ತು ಅಹಿಂಸೆಯ ಮೂಲಕ ಭಾರತಕ್ಕೆ ಸ್ವಾತಂತ್ರ್ಯವನ್ನು ಪಡೆಯಲು ಗಾಂಧೀಜಿ ಅವರು ಮುಂದಾದರು ಹಾಗೂ ಅದರಲ್ಲಿ ಅವರು ಯಶಸ್ವಿಯನ್ನು ಕಂಡವರು. ಗಾಂಧೀಜಿ ಅವರ ರಾಜನೀತಿ ಚಿಂತನೆಯ ಮೇಲೆ ಪ್ರಮುಖವಾಗಿ ಪ್ರಭಾವ ಬೀರಿದವರು ಗೋಪಾಲ ಕೃಷ್ಣ ಗೋಖಲೆ. ಇವರು ದೇಶ ಸೇವೆಯ ಧ್ಯೇಯವನ್ನು ಇಟ್ಟುಕೊಂಡಿರುವ ರಾಜಕೀಯ ಸೇನಾನಿಗಳಿಗೆ ಮೂಲ ಮಾರ್ಗದರ್ಶಕರಾಗಿದ್ದರು. ಗಾಂಧೀಜಿ ಅವರ ಮೇಲೆ ಇವರು ಸೇವಾ ಕಾರ್ಯಕರ್ತರಾಗಿ, ರಾಜಕೀಯ ಗುರುವಾಗಿ ಅಗಾಧವಾದ ಪ್ರಭಾವ ಬೀರಿದ್ದಾರೆ. ಗೋಖಲೆ ಮತ್ತು ಗಾಂಧೀಜಿ ಅವರ ಪ್ರಪ್ರಥಮ ಸ್ನೇಹತ್ವವು 1886ರಲ್ಲಿ ಆಯಿತು. ಆವಾಗ ಇದೇ ಗಾಂಧೀಜಿ ಅವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ವಾಪಸ್ಸು ಬಂದು ಇಲ್ಲಿನ ಜನರ ಸೇವೆ ಮಾಡುವ ಪ್ರಮುಖ ಉದ್ದೇಶವೊಂದನ್ನು ಇಟ್ಟುಕೊಂಡಿದ್ದರು. ಗಾಂಧೀಜಿ ಅವರು ಗೋಖಲೆ ಅವರ ಬಗೆಗೆ ಅವರ 'ಆತ್ಮ ಚರಿತ್ರೆ'ಯಲ್ಲಿ ಸರ್ ಫಿರೋಜ್ ಷಾ ನನಗೆ ಹಿಮಾಲಯದಂತೆ ತೋರಿದ್ದರು. ಲೋಕಮಾನ್ಯ ತಿಲಕ್ ಅವರು ಸಮುದ್ರದಂತೆ, ಆದರೆ ಗೋಖಲೆ ಅವರು ಗಂಗಾನದಿಯಂತೆ ಕಂಡಿದ್ದಾರೆ. ಹಿಮಾಲಯ ಅಳತೆ ಮೀರಿದ್ದು; ಸಮುದ್ರದಲ್ಲಿ ಸುಲಭವಾಗಿ ಮುನ್ನುಗ್ಗಲಾರೆವು; ಗಂಗೆಯ ಮಡಿಲು ನಮ್ಮನ್ನು ಆಹ್ವಾನಿಸುತ್ತದೆ. ಹುಟ್ಟು ಹಿಡಿದು ದೋಣಿಯಲ್ಲಿ ಅದರ ಮೇಲೆ ಸಾಗುವುದೇ ಒಂದು ಸಂತೋಷ; ಉಪಾಧ್ಯಾಯನು

ಶಾಲೆಗೆ ಸೇರಲು ಬಂದಿರುವ ವಿದ್ಯಾರ್ಥಿಯನ್ನು ಕಾಣುವಂತೆ ಗೋಖಲೆ ಅವರು ಗಾಂಧೀಜಿ ಅವರನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ರಾಜಕೀಯ ಕ್ಷೇತ್ರದಲ್ಲಿ ಗೋಖಲೆ ತಮ್ಮ ಜೀವಿತ ಕಾಲದಲ್ಲಿಯೂ ಮತ್ತು ಇಂದಿಗೂ ನನ್ನ ಹೃದಯದಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದಿದ್ದಾರೆ ಎಂದು ಗಾಂಧೀಜಿ ಅವರು ಗೋಖಲೆ ಅವರ ಬಗೆಗಿರುವ ಅತಿಯಾದ ಪ್ರೀತಿ ಮತ್ತು ಆತ್ಮೀಯನ್ನು ತೋರ್ಪಡಿಸಿದ್ದಾರೆ.

ಗೋಖಲೆ ಅವರದು ಧರ್ಮಯುಕ್ತ ವ್ಯಕ್ತಿಯ ಜೀವನವಾಗಿತ್ತು. ಪ್ರತಿಯೊಂದು ಕೆಲಸವನ್ನೂ ಭಕ್ತಿ ಭಾವನೆಯಿಂದ ಮಾಡುತ್ತಿದ್ದರು. ಯಾರು ಸಮರ್ಪಕವಾದ ಬಾಳನ್ನು ನಡೆಸುತ್ತಾರೋ, ಅವರು ಸರಳವೂ; ಸತ್ಯಸ್ವರೂಪಕರು; ದಯೆಯಿಂದ ಇರುವವರು ಮತ್ತು ಎಲ್ಲವನ್ನು ತಮ್ಮದೆಂದು ತಿಳಿಯುವ ಅರಿವು ಪಡೆದಿರುವವರೋ ಅಂತ ಮಹಾನ ವ್ಯಕ್ತಿ ಗೋಖಲೆಯವರಾಗಿದ್ದಾರೆ. ಅವರು ಕರ್ತವ್ಯವನ್ನು ಅಂತಃಸಾಕ್ಷಿಪೂರ್ವಕವಾಗಿ ನಿರ್ವಹಿಸುತ್ತಿದ್ದರು. ತಮ್ಮ ಕೆಲಸದ ವಿಚಾರವಾಗಿ ಸಾರ್ವಜನಿಕರು ಹೇಗೆ ಅಭಿಪ್ರಾಯ ವ್ಯಕ್ತಪಡಿಸಬಲ್ಲರು ಎಂಬ ವ್ಯರ್ಥವಾದ ಸ್ವಾರ್ಥದ ಯೋಚನೆಗೆ ಅವರು ಅವಕಾಶ ಮಾಡಿಕೊಡುತ್ತಿರಲಿಲ್ಲ. ಅವಶ್ಯಕ ಬಿದ್ದರೆ ದೇಶಕ್ಕಾಗಿ ಸಂತೋಷದಿಂದ ಗಲ್ಲಿಗೇರುವ ಸಾಮರ್ಥ್ಯ ಅವರಲ್ಲಿತ್ತು ಎನ್ನುತ್ತಾರೆ ಗಾಂಧೀಜಿ. ಆದ್ದರಿಂದ ಈ ಮಹಾನ್ ವ್ಯಕ್ತಿಯಿಂದ ಪಾಠವನ್ನು ಕಲಿಯುದಾದರೆ; ಭಕ್ತನ ರೀತಿಯಲ್ಲಿ ಗಾಂಧೀಜಿ ಅವರು ಮಾಡುತ್ತಿದ್ದ ಕಾರ್ಯವನ್ನು ನಾವು ಅನುಸರಿಸಬೇಕು. ನಾವೆಲ್ಲರೂ ಗೋಖಲೆಯವರಂತೆ ಪಾಂಡಿತ್ಯವನ್ನು ಸಂಪಾದಿಸದೇ ಇರಬಹುದು. ಆದರೆ ಜನಸೇವೆ ಮಾಡುವಲ್ಲಿ ನಾವೆಲ್ಲರೂ ಧೈರ್ಯ, ಸತ್ಯ, ಪ್ರಾಮಾಣಿಕತೆ, ಸಹನೆ, ನಮ್ರತೆ, ನ್ಯಾಯಯುತ ವಿವೇಚನೆ ಮತ್ತು ಸಾಧನೆ ಈ ಗುಣಗಳನ್ನು ಬೆಳೆಸಿಕೊಳ್ಳಬೇಕು. ದೇಶ ಸೇವೆಗಾಗಿ ಅವುಗಳನ್ನು ಮೀಸಲಾಗಿಡಬೇಕು. ಇದೇ ಭಕ್ತನ ಭಾವವಾಗಿರಬೇಕು. ಸಾರ್ವಜನಿಕ ಜೀವನ ಧರ್ಮದಿಂದ ಕೂಡಿದ್ದಾಗಿರಬೇಕು ಎಂಬುದು ಗಾಂಧೀಜಿ ಅವರ ಪ್ರತಿಪಾದನೆಯಾಗಿತ್ತು.

ಗಾಂಧೀಜಿ ಅವರು ಗೋಖಲೆ ಅವರನ್ನು ತಮ್ಮ ರಾಜಕೀಯ ಗುರುವೆಂದು ಕರೆದುಕೊಂಡಿದ್ದಾರೆ. ಏಕೆಂದರೆ; ಅವರಲ್ಲಿದ್ದ ಅಚಲವಾದ ಭಕ್ತಿ, ಸ್ನೇಹ ಮತ್ತು ಗುರು–ಶಿಷ್ಯರ ನಡುವಣ ಸಂಬಂಧ ಸಂಪೂರ್ಣವಾಗಿ ಧಾರ್ಮಿಕತೆಯಿಂದ ಕೂಡಿತ್ತು ಮತ್ತು ಶಾಂತಿ–ಪ್ರೀತಿಯ ಮೂಲ ಮಂತ್ರವನ್ನು ಸಹ ಇವರಿಂದಲೇ ಗಾಂಧೀಜಿ ಅವರು ಪಡೆದರು. ಗೋಖಲೆ ಅವರು ಅವರಿಗೆ ವಿಶೇಷವಾದ ವಾತ್ಸಲ್ಯವನ್ನು ತೋರಿಸುವುದರ ಮೂಲಕ ಅಚ್ಚಳಿಯ ಪ್ರಭಾವಿತರಾಗಿದ್ದಾರೆ. ಗಾಂಧೀಜಿ ಅವರು ಗೋಖಲೆ ಅವರನ್ನು ಕುರಿತು ಹೀಗೆ ಹೇಳುತ್ತಾರೆ. ಧರ್ಮದ ಅಂತಃ ಸತ್ವವನ್ನು ಚೆನ್ನಾಗಿ ತಿಳಿದುಕೊಂಡಿದ್ದರು. ಅದರಲ್ಲಿ ನನಗೆ ಸ್ವಲ್ಪವೂ ಸಂಶಯವಿಲ್ಲ. ಮತ ಧರ್ಮಾಚರಣೆಗಳನ್ನು ನಡೆಸುವ ಸೋಗು ಅವರಲ್ಲಿ ಸ್ವಲ್ಪವೂ ಇರಲಿಲ್ಲ. ಅವರ ಬದುಕು ಚೈತನ್ಯದಿಂದ ತುಂಬಿತ್ತು. ನಮ್ಮ ರಾಜಕೀಯ ಚಳವಳಿ ಧರ್ಮದ ಚೈತನ್ಯದಿಂದ

ಕೂಡಿರದಿದ್ದರೆ ಅದು ವಿಫಲವಾಗುತ್ತಿತ್ತು. ನಮ್ಮ ರಾಜಕೀಯ ಸ್ಥಿತಿ ಸುಧಾರಿಸುವವರೆಗೆ ಏಳ್ಗೆ ಹೊಂದುವುದಿಲ್ಲ. ನಮ್ಮ ರಾಜಕೀಯ ಸ್ಥಿತಿಯನ್ನು ಸುಧಾರಿಸುವಲ್ಲಿ ಸಾಧನವು ಶುದ್ಧಿವಾಗಿರಬೇಕು. ಇಲ್ಲದಿದ್ದರೆ ಆಗುವ ಬದಲಾವಣೆಯಲ್ಲಿ ಪ್ರಗತಿ ಕಾಣುವುದಿಲ್ಲ. ರಾಜಕೀಯ ಚಟುವಟಿಕೆಗಳು ನ್ಯಾಯಯುತವಾಗಿ, ಧರ್ಮದ ಮೂಲದಿಂದ ಕೂಡಿರದಿದ್ದರೆ ನಮ್ಮ ಗುರಿಯನ್ನು ತಲುಪುವುದಿಲ್ಲ ಎಂಬುದನ್ನು ನಾವು ಗೋಖಲೆ ಅವರಿಂದ ನಾವು ಕಲಿಯಬೇಕಾಗಿದೆ ಎಂದಿದ್ದಾರೆ ಗಾಂಧೀಜಿ.

ಹೀಗೆ, ಗಾಂಧೀಜಿ ಅವರು ಗೋಖಲೆ ಅವರಿಂದ ವಿವಿಧ ಸನ್ನಿವೇಶಗಳಲ್ಲಿ ಪಡೆದಿರುವ ಅನುಭವವನ್ನು ಕುರಿತು ಹೀಗೆ ಹೇಳುತ್ತಾರೆ. ರಾಜಕೀಯ ಕಾರ್ಯಕರ್ತರಲ್ಲಿ ಸರ್ವರೂ ಇಷ್ಟಪಡುವ ಸ್ಫಟಿಕದಂತೆ ನಿರ್ಮಲ, ಸಾಕುಪ್ರಾಣಿಯಂತೆಯೇ ಸಾಧು, ಸಿಂಹದಂತೆ ಧೈರ್ಯಶಾಲಿ, ಪರಮೋತ್ತಮ ಪುರುಷ ಗೋಖಲೆ ಅವರಾಗಿದ್ದಾರೆ. ಆದ್ದರಿಂದಲೇ ಗಾಂಧೀಜಿ ಅವರು ಗೋಖಲೆ ಅವರನ್ನು ಮಹಾನ್ ಆದರ್ಶ ರಾಜಕೀಯ ಗುರುವೆಂದು ತಮ್ಮ ರಾಜಕೀಯ ಚಿಂತನೆಯಲ್ಲಿ ಪ್ರಮುಖ ಸ್ಥಾನವನ್ನು ಕೊಟ್ಟಿದ್ದಾರೆ ಎಂಬುದನ್ನು ಗುರುತಿಸಬಹುದು. ಗಾಂಧೀಜಿ ಅವರು ಗೋಖಲೆ ಅವರಿಂದ ಪಡೆದ ರಾಜನೀತಿಯ ಅನುಭವಗಳು ಅವರ ರಾಜನೀತಿ ದರ್ಶನಕ್ಕೆ ಅಚ್ಚಳಿಯದ ಪ್ರಭಾವವನ್ನು ಉಂಟು ಮಾಡಿವೆ.

ಮುಂದುವರೆದು ಗೋಪಾಕೃಷ್ಣ ಗೋಖಲೆ ಅವರು ಆರ್ಥಿಕತೆ ಮತ್ತು ಅಭಿವೃದ್ಧಿ ಚಿಂತನೆಯ ಮೇಲೆ ಪ್ರಭಾವ ಬೀರಿದ ರಾಷ್ಟ್ರೀಯವಾದಿ ನಾಯಕ ಮತ್ತು ಸಮಾಜ ಸುಧಾರಕ. ಅವರು ಗಾಂಧೀಜಿ ಮತ್ತು ಮೊಹಮ್ಮದ್ ಅಲಿ ಜಿನ್ನಾ ಇಬ್ಬರಿಗೂ ಮಾರ್ಗದರ್ಶಕರು ಮತ್ತು ಗುರುವಾಗಿದ್ದರು. ಗೋಖಲೆ ಅವರ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಸುಧಾರಣೆಗಳು ಗಾಂಧೀಜಿ ಅವರ ಚಿಂತನೆಯ ಮೇಲೆ ಹೆಚ್ಚು ಪ್ರಭಾವ ಬೀರಿದವು. ಗೋಖಲೆ ಅವರು ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಆಯ್ಕೆಯಾದಗಿದ್ದರು ಮತ್ತು ಬಜೆಟ್ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಆ ಚರ್ಚೆಗಳಲ್ಲಿ ಅವರು ಜಾನ್ ಮೇನಾರ್ಡ್ ಕೇನ್ಸ್ ಅವರಂತಹವರನ್ನು ಎದುರಿಸುತ್ತಿದ್ದರು. ಭಾಷಣಗಳ ಮೂಕ ವಿರೋಧಿಸುವುದರ ಜೊತೆಗೆ ಬ್ರಿಟಿಷ್ ನೀತಿಗಳು ಭಾರತದ ಆರ್ಥಿಕ ವ್ಯವಸ್ಥೆಯನ್ನು ಹೇಗೆ ಹಾಳು ಮಾಡುತ್ತಿವೆ ಎಂಬುದನ್ನು ಅರಿತುಕೊಳ್ಳಲು ಗಾಂಧೀಜಿ ಅವರಿಗೆ ಸಾಧ್ಯವಾಯಿತು. ಅವರ ಬಜೆಟ್ ಭಾಷಣಗಳು ಮತ್ತು ಆರ್ಥಿಕ ಸುಧಾರಣೆಯ ಶಿಫಾರಸ್ಸುಗಳು ಭಾರತೀಯ ಚಿಂತಕರು ಮತ್ತು ಪಾಶ್ಚಿಮಾತ್ಯ ಆರ್ಥಿಕ ಉದಾರವಾದಿಗಳು ಪ್ರತಿಪಾದಿಸಿದ ಆರ್ಥಿಕ ಸಿದ್ಧಾಂತಗಳೆರಡನ್ನೂ ಸಮೀಕರಿಸಿದವು. ಗೋಖಲೆ ಅವರು ಮೂಲತಃ ಅರ್ಥಶಾಸ್ತ್ರಜ್ಞರಾಗಿರಲ್ಲಿಲ್ಲ. ಆದರೆ ಅವರ ಎಲ್ಲಾ ಬಜೆಟ್ ಭಾಷಣಗಳು ವಸಾಹತುಶಾಹಿ ಭಾರತದ ಆರ್ಥಿಕ ಅಗತ್ಯತೆಗಳು ಮತ್ತು ಬಿಕ್ಕಟ್ಟಿನ ಬಗೆಗೆ ಆಳವಾದ ತಿಳುವಳಿಕೆಯನ್ನು

ಬಹಿರಂಗಪಡಿಸಿದವು. ಗೋಖಲೆ ಅವರು ಸರ್ಕಾರವನ್ನು, ಅದರ ವಿಶ್ಲೇಷಣೆಯ ಸ್ವರೂಪವನ್ನು ತೀವ್ರವಾಗಿ ಟೀಕಿಸಿದರು. ಇದನ್ನು ದಾದಾಭಾಯಿ ನವರೋಜಿ ಅವರು 'ಸಂಪತ್ತಿನ ಸೋರಿಕೆ ಸಿದ್ಧಾಂತ' ಎಂದು ಸ್ಪಷ್ಟವಾಗಿ ಗುರುತಿಸಿದರು. ಗೋಖಲೆ ಅವರ ಆರ್ಥಿಕ ದೃಷ್ಟಿಯ ಪ್ರಮುಖ ಅಂಶವೆಂದರೆ; ಸ್ವಾವಲಂಬನೆಯನ್ನು ಅಭಿವೃದ್ಧಿಪಡಿಸುವುದು ಅಥವಾ ಸ್ವದೇಶಿಯನ್ನು ಎತ್ತಿಹಿಡಿಯುವುದು. ಇದು ಭಾರತೀಯ ಜನಸಂಖ್ಯೆಯ ಬೆಳವಣಿಗೆಗೆ ಮತ್ತು ಆರ್ಥಿಕ ಅಭಿವೃದ್ಧಿಗೆ ಸಂಬಂಧ ಹೊಂದಿದೆ. ಗೋಖಲೆ ಅವರು ಹೆಚ್ಚಾಗಿ ಸುಶಿಕ್ಷಿತ ಹಾಗೂ ಮಧ್ಯಮ ವರ್ಗದ ಭಾರತೀಯರನ್ನು ಪ್ರತಿನಿಧಿಸಿದರು. ಇಂಗ್ಲಿಷ್ ಶಿಕ್ಷಣ ಮತ್ತು ಪಾಶ್ಚಮಾತ್ಯ ತತ್ವಲಿಾಸ್ತ್ರಕ್ಕೆ ಒಡ್ಡಿಕೊಂಡಿದ್ದರು. ಗಾಂಧೀಜಿ ಅವರಿಗೆ ಗೋಖಲೆ ಅವರು ನೀಡಿದ ಸಲಹೆಯೆಂದರೆ, "ಕಣ್ಣು ಮತ್ತು ಕಿವಿ ತೆರೆದು, ಆದರೆ ಬಾಯಿ ಮುಚ್ಚಿಕೊಂಡು ದೇಶದ ಉದ್ದಗಲಕ್ಕೂ ಪ್ರವಾಸ ಮಾಡು; ಕಲಿಯುವುದು, ತಿಳಿದುಕೊಳ್ಳುವುದು ಸಾಕಷ್ಟು ಇದೆ. ಆದರೆ ಪ್ರತಿಕ್ರಿಯಿಸುವುದಲ್ಲ. ಗೋಖಲೆ ಅವರ ಮೂಲ ಚಿಂತನೆಗೆ ಸ್ವಲ್ಪ ವಿರುದ್ಧವಾದ ತತ್ವಗಳನ್ನು ನಾಗರಿಕ ಅಸಹಕಾರ ಚಳವಳಿಯಲ್ಲಿ ಗಾಂಧೀಜಿ ಅವರು ಅಳವಡಿಸಿಕೊಂಡರು.

ಬ್ರಿಟಿಷ್ ವಿದ್ವಾಂಸರಾದ ಜಾನ್ ರಸ್ಕಿನ್ ಅವರು ಅಪಾರವಾದ ಸಾಮಾಜಿಕ ಕಳಕಳಿಯನ್ನು ಹೊಂದಿದ್ದರು. ಇವರ 'Unto This Last" ಎಂಬ ಕೃತಿಯು ಉತ್ಕೃಷ್ಟವಾಗಿದ್ದು, ಇದು ಗಾಂಧೀಜಿ ಅವರ ಮೇಲೆ ಅಪಾರ ಪ್ರಭಾವ ಬೀರಿದೆ. ಅದರಲ್ಲಿ ಎಲ್ಲರ ಒಳಿತಿನಲ್ಲಿಯೇ ತನ್ನ ಒಳಿತು ಅಡಗಿದೆ; ಎಲ್ಲಾ ಬಗೆಯ ಶ್ರಮಗಳು ಸಮಾನವಾದವು ಹಾಗೂ ಸಮವಾದ ಗೌರವಗಳನ್ನು ಹೊಂದಿರುವಂತಹುಗಳು; ಶ್ರಮಜೀವಿಯ ಜೀವನವೇ ನಿಜವಾದ ಜೀವನ, ಏಕೆಂದರೆ, ಸಮಾಜದ ಹಿತಕ್ಕಾಗಿ ಅವರು ದುಡಿಯುತ್ತಾರೆ. ಪ್ರತಿಯೊಂದು ಪರಿಶ್ರಮಕ್ಕೂ ತನ್ನದೇ ಆದ ಗೌರವವಿದೆ.

ಗಾಂಧೀಜಿ ಅವರ ಈ ಮೇಲಿನ ವಿಚಾರಗಳಿಂದ ಪ್ರಭಾವಿತರಾಗಿ ತಮ್ಮ ಆತ್ಮಕತೆಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ. ಈ ಮೇಲಿನ ಮೂರು ತತ್ವಗಳಲ್ಲಿ ಮೊದಲನೆಯದು ನನಗೆ ತಿಳಿದಿತ್ತು. ಎರಡನೆಯದು ಮುಸುಕು–ಮುಸುಕಾಗಿ ಅರ್ಥವಾಗಿತ್ತು. ಮೂರನೆಯದು ನನಗೆ ತಿಳಿದೇ ಇರಲಿಲ್ಲ. ಈ ತತ್ವಗಳನ್ನು ಕಾರ್ಯರೂಪಕ್ಕೆ ತರಲು ಅಥವಾ ಪರಿವರ್ತಿಸಲು ಬಯಸಿದ ಗಾಂಧೀಜಿ ಅವರು 'ಸರ್ವೋದಯ' ಎಂಬ ಹೊಸ ಸಿದ್ಧಾಂತವನ್ನು ಕಟ್ಟಿದರು. ಸರ್ವೋದಯ ಸಮಾಜದಲ್ಲಿ ಪ್ರೀತಿ, ಸಹಕಾರ, ಸತ್ಯ, ಅಹಿಂಸೆ ಮೊದಲಾದ ತತ್ವಗಳು ಅತಿ ಮುಖ್ಯವಾದ ಸ್ಥಾನವನ್ನು ಹೊಂದಿವೆ. 'ಅನ್ ಟು ದಿ ಲಾಸ್ಟ್' ಹೆಸರೇ ಸೂಚಿಸುವಂತೆ, 'ಈ ಕಟ್ಟ ಕಡೆಯವನಿಗೂ' ಎಂದು, ಅದುವೇ ಗಾಂಧೀಜಿ ಅವರು ಕಂಡ ಸರ್ವೋದಯ. ಇದರಲ್ಲಿ ಅಂತ್ಯೋದಯವೇ ಸರ್ವೋದಯ ಎಂಬ ತತ್ವ ಅಡಕವಾಗಿದೆ. ಸರ್ವೋದಯದಲ್ಲಿ ಪ್ರಮುಖ ಮೂರು ವಿಚಾರಗಳನ್ನು ಗಮನಿಸಬಹುದು. ಮೊದಲನೆಯದು; ಎಲ್ಲರ ಶ್ರೇಯಸ್ಸಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಶ್ರೇಯಸ್ಸು ಅಡಗಿರುತ್ತದೆ. ವ್ಯಕ್ತಿ ಮತ್ತು ಸಮಾಜ ಒಂದಕ್ಕೊಂದು

ಪೂರಕವಾಗಿವೆ. ಆದ್ದರಿಂದ ದೇಶದಲ್ಲಿ ಶಾಂತಿ–ಸುವ್ಯವಸ್ಥೆಯು ಅಹಿಂಸಾತ್ಮಕ ಸಮಾಜದ ಮೇಲೆ ರಚನೆಯಾಗಬೇಕು. ಆಗ ನಿಜವಾದ ಪ್ರಜಾಪ್ರಭುತ್ವದ ಬೆಳವಣಿಗೆ, ಎಲ್ಲೆಲ್ಲೂ ಪ್ರಗತಿ ಆಗುವುದರಲ್ಲಿ ಸಂದೇಹವಿಲ್ಲ.

ಎರಡನೆಯದಾಗಿ; ನಗರದಲ್ಲಿರುವ ಒಬ್ಬ ನ್ಯಾಯವಾದಿ ಮತ್ತು ಕ್ಷೌರಿಕ ಇವರಿಬ್ಬರಿಗೂ ತಮ್ಮ ತಮ್ಮ ಸಾಮಾರ್ಥ್ಯಕ್ಕೆ ಅನುಗುಣವಾಗಿ ಕಾರ್ಯಮಾಡುವ ಹಕ್ಕು ಹೊಂದಿರುತ್ತಾರೆ. ಸಮಾಜವು ಇಲ್ಲಿ ಕ್ಷೌರಿಕನನ್ನೂ ಕೀಳು ವರ್ಗದವನೆಂದೂ ಮತ್ತು ನ್ಯಾಯವಾದಿಯನ್ನು ಮೇಲುವರ್ಗದವನೆಂದು ತಿಳಿಯಬಾರದು. ಉಪಜೀವನಕ್ಕೆ ಎಲ್ಲ ತರಹದ ಉದ್ಯೋಗಗಳು ಒಂದೇ ಗೌರವ ಭಾವನೆಯನ್ನು ಹೊಂದಿರುತ್ತವೆ.

ಮೂರನೆಯದಾಗಿ; ರೈತ ಮತ್ತು ಕಸಬುದಾರನ ಜೀವನವು ಪುಣ್ಯಮಯ. ರೈತನು ಶ್ರಮಜೀವಿಯಾಗಿ ಮುಂಜಾನೆಯಿಂದ ಸಂಜೆಯವರೆಗೂ ಮಳೆ–ಗಾಳಿ ಎನ್ನದೇ ದುಡಿಯುತ್ತಾನೆ. ಕಷ್ಟಪಡುತ್ತಾನೆ. ಕೈ–ಕಸಬು ಮಾಡುವವನ ಸ್ಥಿತಿಯೂ ಹಾಗೆಯೇ. ಹೊಟ್ಟೆಗೆ ಬೇಕಾಗುವಷ್ಟೇ ಅಥವಾ ಇನ್ನೂ ಕಡಿಮೆಯೇ ಇವನ ದುಡಿತಕ್ಕೆ ಪ್ರತಿಫಲ. ಜೀವನೋಪಾಯಕ್ಕಾಗಿ ಮುಂಜಾನೆಯಿಂದ ಸಂಜೆಯವರೆಗೂ ದುಡಿದರೂ ಜೀವನಕ್ಕೆ ಬೇಕಾಗುವುದಕ್ಕಿಂತ ಹೆಚ್ಚಿಗೆ ಸಂಪಾದಿಸಿ, ಸಮಾಜದಲ್ಲಿ ಶ್ರೀಮಂತರಾಗಲು ಸಾಧ್ಯವೇ ಇಲ್ಲ. ಸುಲಿಗೆ ಈ ಜನಕ್ಕೆ ಗೊತ್ತೇ ಇಲ್ಲ. ಆದ್ದರಿಂದ ರಾಷ್ಟ್ರದ ಬೆನ್ನೆಲುಬಾದ ರೈತನ ಮತ್ತು ಕೂಲಿಕಾರನ ಜೀವನವು ಸುಧಾರಿಸದಿದ್ದರೆ, ದೇಶವು ಅಧೋಗತಿಗೆ ಮುಟ್ಟುವುದು. ಇಂದು ಜೀವನದ ಎಲ್ಲಾ ಮೌಲ್ಯಗಳು ಸಮಗ್ರವಾಗಿ ಬದಲಾವಣೆ ಆದಗಲೇ ಎಲ್ಲರ ಕಲ್ಯಾಣ ಮತ್ತು ಸರ್ವೋದಯ ಸಮಾಜದ ನಿರ್ಮಾಣ ಸಾಧ್ಯವಾಗುವುದು.

ಗಾಂಧೀಜಿ ಅವರ ಚಿಂತನೆಯ ಮೇಲೆ ಪ್ರಭಾವ ಬೀರಿದವರು ಲಿಯೋ ಟಾಲ್‌ಸ್ಟಾಯ್. ಇವರು ರಷ್ಯಾ ದೇಶದ ಸುಪ್ರಸಿದ್ಧ ಸಾಹಿತಿ. ಇವರ ಕೃತಿ "ದೇವರ ರಾಜ್ಯ ನಿನ್ನೊಳಗಿದೆ" (ಖಿಜ ಏಟಿರಜಂಟ ಂಜಿ ಉಂಜ ಏ ಘುಣ್ಣುಟಿ ಜಂಣ) ಗಾಂಧೀಜಿ ಅವರು ಈ ಕೃತಿಯಿಂದ ಕೇವಲ ಸೈದ್ಧಾಂತಿಕ ಅನುಭವವನ್ನು ಪಡೆಯದೆ ಅದನ್ನು ತಮ್ಮ ಜೀವನದಲ್ಲಿ ಮನವರಿಕೆ ಮಾಡಿಕೊಂಡು ಪರಿಶ್ರಮದ ಮೂಲಕ ಸತ್ಯದ ಪ್ರಯೋಗವನ್ನು ಕಂಡುಕೊಂಡರು. ಟಾಲ್‌ಸ್ಟಾಯ್ ಅವರ ಸಿದ್ಧಾಂತವನ್ನು ಕ್ರಿಶ್ಚಿಯನ್ ಅರಾಜಕತಾವಾದ ಎಂದು ಕರೆಯಬಹುದು. ಏಕೆಂದರೆ, ಇದು ಆಧುನಿಕ ಕಾಲದ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳ ಪರಿಹಾರ ಕಂಡುಕೊಳ್ಳುವಲ್ಲಿ ಸಹಾಯಕವಾಗಿದೆ. ಮಾನವರ ಎಲ್ಲ ಸಮಸ್ಯೆಗಳಿಗೆ ಪ್ರೀತಿಯೊಂದೇ ಆಧಾರ ಎಂಬುವುದು ಅವರ ಸಿದ್ಧಾಂತವಾಗಿದೆ. ಟಾಲ್‌ಸ್ಟಾಯ್ ಅವರ ತತ್ವಗಳಾದ ಹಿಂಸೆಯನ್ನು ಪ್ರತಿರೋಧಿಸುವ ಮತ್ತು ಅಸಹಕಾರಗಳಲ್ಲಿ ಪ್ರೀತಿಯೊಂದೇ ತಳಹದಿಯಾಗಿದೆ.

ಟಾಲ್‌ಸ್ಟಾಯ್ ಅವರ ದೃಷ್ಟಿಯಲ್ಲಿ ಪ್ರೇಮವೆಂಬುದು ಇತರ ಜೀವಿಗಳೊಡನೆ ಸಂವಹನ ಮತ್ತು ಏಕತೆಯ ಆಕಾಂಕ್ಷೆ ಆಗಿದೆ. ಅದು ಯಾವಾಗಲೂ ಉದಾತ್ತ ಚಟುವಟಿಕೆಗಳ ನೆಲೆಯನ್ನು ಮುಕ್ತಗೊಳಿಸುತ್ತದೆ. ಅದುವೇ ಮಾನವನ ಜೀವನದ ಪರಮೋಚ್ಚ ಹಾಗೂ ಏಕಮಾತ್ರ ನಿಯಮ. ಅದು ಪ್ರತಿಯೊಬ್ಬನ ಆತ್ಮದಲ್ಲಿ ಆಳವಾಗಿ ಅನುಭವದ ಮೂಲಕ ಹೊರಹೊಮ್ಮುತ್ತದೆ. ಚಿಕ್ಕ ಮಕ್ಕಳ ಆತ್ಮದಲ್ಲಿ ಇದು ಇನ್ನೂ ಅರ್ಥಗರ್ಭಿತವಾಗಿರುವುದನ್ನು ಕಾಣುತ್ತೇವೆ. ಇದು ಜೀವನದ ಮೂಲಭೂತ ನಿಯಮವಾದ ಪ್ರೇಮದೊಂದಿಗೆ ಹಿಂಸೆಗೆ ಅವಕಾಶ ಮಾಡಿಕೊಡದ ವಾಸ್ತವಿಕತೆಯನ್ನು ತಿಳಿಸುತ್ತದೆ. ಒಮ್ಮೆ ಪ್ರೇಮವು ಪ್ರತಿರೋದವನ್ನು ಒಪ್ಪಿತೆಂದರೆ ಅದು ಇಲ್ಲವಾಗುವುದು ಮತ್ತು ಅಸ್ತಿತ್ವದ ನಿಯಮವಾಗಿ ಸಹ ಉಳಿಯಲಾರದು. ಅದರ ಬದಲಾಗಿ ಹಿಂಸೆಯು ಪ್ರಾರಂಭವಾಗುವುದು. ಪ್ರೇಮ ನಿಯಮವನ್ನು ಬೇರಾವುದೇ ಧಾರ್ಮಿಕ ಸಿದ್ಧಾಂತದಲ್ಲಿ ಇಲ್ಲದಷ್ಟು ಕ್ರೈಸ್ತ ಧರ್ಮದಲ್ಲಿ ಕಂಡುಬರುತ್ತದೆ. ಏಸುವಿನಂತೆ ಜೀವಿಸು, ಏಸು ನೆರೆಹೊರೆಯವರೊಡನೆ ಪ್ರೀತಿಯಿಂದ ಇದ್ದು, ವೈರತ್ವವನ್ನು ಮಾಡುವುದಿಲ್ಲ. ಹಿಂಸಾಕೃತ್ಯಗಳಿಗೆ ಕೈ ಹಾಕುವುದಿಲ್ಲ. ಪ್ರತಿಯಾಗಿ ತಾನೆ ನೋವನ್ನು ಅನುಭವಿಸುತ್ತಾನೆ. ಪಾಪದ ವಿಚಾರದಲ್ಲಿ ತನ್ನ ನಡತೆಯಿಂದ ತಾನು ಸ್ವತಂತ್ರನಾಗುತ್ತಾನೆ ಮತ್ತು ಜಗತ್ತನ್ನು ಹೊರ ಅಧಿಕಾರದಿಂದ ಮುಕ್ತಗೊಳಿಸುತ್ತಾನೆ. ಕ್ರೈಸ್ತ ಪ್ರಪಂಚವು ಈ ನಿಯಮವನ್ನು ಅರ್ಥಬದ್ಧವಾಗಿ ಸ್ವೀಕರಿಸಿದೆ ಎಂಬ ಟಾಲ್‌ಸ್ಟಾಯ್ ಅವರ ಪ್ರಭಾವಿತ ಚಿಂತನೆಗಳ ಅವಲೋಕನವನ್ನು ಮಾಡಿ ಗಾಂಧೀಜಿ ಅವರು ತಮ್ಮ ಚಿಂತನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಗಾಂಧೀಜಿ ಅವರು ಟಾಲ್‌ಸ್ಟಾಯ್ ಅವರಿಂದ ಕ್ರಿಶ್ಚಿಯನ್ ಧರ್ಮದಲ್ಲಿರುವಂತೆ ಮಾನವೀಯತೆ ಬಗೆಗೆ ತಿಳಿದಿದ್ದಾರೆ. 'ನಾವೆಲ್ಲರೂ ಒಂದೇ ತಂದೆಯ ಮಕ್ಕಳು; ಇದರಲ್ಲಿ ಯಾವುದೇ ತೆರನಾದ ಭೇದವಿರುವುದಿಲ್ಲ. ನಾವೆಲ್ಲರೂ ಸಹೋದರ–ಸಹೋದರಿಯರು; ಮತ್ತು ನಮ್ಮೆಲ್ಲರಿಗೆ ಪ್ರೀತಿಯೊಂದೇ ಕಾನೂನು ಅದು ಎಲ್ಲರಿಗೂ ಏಕೈಕ ತಂದೆಯ ಹೃದಯವಿದ್ದಂತೆ ಎಂಬ ತತ್ವ ವಿಚಾರವನ್ನು ಹೊಂದಿದ್ದಾರೆ. ಇದೇ ಅಲ್ಲದೇ ಟಾಲ್‌ಸ್ಟಾಯ್ ಅವರಿಂದ ಸಮಾಜವಾದ, ಕಮ್ಯುನಿಸಂ, ಅರಾಜಕತಾವಾದ ಹೆಚ್ಚುತ್ತಿರುವ ಅಪರಾಧಗಳು, ನಿರುದ್ಯೋಗ, ಶ್ರೀಮಂತರ ಮಿತಿ ಮೀರಿದ ಶೋಷಣೆ ಮತ್ತು ಹೆಚ್ಚುತ್ತಿರುವ ಆತ್ಮಹತ್ಯೆಗಳ ಬಗೆಗೆ ತಿಳಿದಿದ್ದಾರೆ. ಇವುಗಳಿಗೆ ಪ್ರೇಮ ನಿಯಮದ ಅಂಗೀಕಾರದ ಮುಖಾಂತರ ಪರಿಹಾರ ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಟಾಲ್‌ಸ್ಟಾಯ್ ಅವರು ಖ್ಯಾತ ಅಹಿಂಸೆಯ ಪ್ರವರ್ತನಾಕಾರರು. ನೈತಿಕ, ಧಾರ್ಮಿಕ ಸಮಸ್ಯೆಗಳನ್ನು ಮನದಟ್ಟಾಗುವಂತೆ ತಿಳಿದು ಜೀರ್ಣಿಸಿಕೊಂಡಿರುವ ವ್ಯಕ್ತಿಯಾಗಿದ್ದಾರೆ. ಗಾಂಧೀಜಿ ಅವರು ಟಾಲ್‌ಸ್ಟಾಯ್ ಅವರ 'ದೇವರ ರಾಜ್ಯ ನಿನ್ನೊಳಗಿದೆ' (The Kingdom of God is Within You) ಎಂಬ ಕೃತಿಯನ್ನು ಓದಿ ಅಹಿಂಸೆಯ ನಿಜವಾದ ಅರ್ಥವವನ್ನು ಗ್ರಹಿಸಿ ಮತ್ತು ಅದಕ್ಕೆ ಅನುಗುಣವಾದ ಜೀವನ ನಡೆಸುವುದಕ್ಕೆ ಕಾಯಕದ ಮಹತ್ವವನ್ನು ಅರಿತುಕೊಂಡರು. ಅಂತ ಜೀವನವನ್ನು

ನಡೆಸುವ 'ಟಾಲ್‌ಸ್ಟಾಯ್ ಫಾರಂ' ಎಂಬ ಹೆಸರಿನಿಂದ ಒಂದು ಆಶ್ರಮವನ್ನು ಕಟ್ಟಿದರು. ಅದರ ಮುಖೇನ ಅಹಿಂಸಾತ್ಮಕ ಕಲ್ಯಾಣ ರಾಷ್ಟ್ರ ಸ್ಥಾಪಿಸುವ ಮಹತ್ವಪೂರ್ಣ ತತ್ವಗಳನ್ನು ಆಚರಣೆಯಲ್ಲಿ ತಂದಿದ್ದಾರೆ.

ಹೀಗೆ, ಗಾಂಧೀಜಿ ಅವರು ಟಾಲ್‌ಸ್ಟಾಯ್ ಅವರ ಕೃತಿಯ ಮುಖಾಂತರ ಮತ್ತು ಪತ್ರಸಾರ ಸಂದೇಶದ ಮೂಲಕ ಪ್ರಭಾವಿತರಾಗಿದ್ದಾರೆ. ಅವರ ರಾಜನೀತಿ ದರ್ಶನಕ್ಕೆ ಪೂರಕವಾದ ಅಹಿಂಸಾತ್ಮಕ ತತ್ವ, ಮಾನವೀಯತೆ ಮುಂತಾದವುಗಳನ್ನು ಮಹತ್ವದ ಪ್ರಭಾವವನ್ನು ಪಡೆದುಕೊಂಡಿದ್ದಾರೆ.

ಹೆನ್ರಿ ಡೇವಿಡ್ ಥೋರೋ ಒಬ್ಬ ಅಮೇರಿಕನ್ ಲೇಖಕ, ಕವಿ ಮತ್ತು ತತ್ವಜ್ಞಾನಿ. ಅವರು ಜುಲೈ 12, 1817 ರಂದು ಜನಿಸಿದರು ಮತ್ತು ಮೇ 6ನೆಯ 1862 ರಂದು 44ನೆಯ ವಯಸ್ಸಿನಲ್ಲಿ ನಿಧನರಾದರು. ಅವರ ಪ್ರಬಂಧವು ಗಾಂಧೀಜಿ ಅವರ ಅಸಹಕಾರದ ತತ್ವದ ಮೇಲೆ ಪ್ರಭಾವವನ್ನು ಬೀರಿತು. ಅಮೇರಿಕಾದಲ್ಲಿ ಗುಲಾಮಗಿರಿಯ ವಿರುದ್ಧ ಪ್ರತಿಭಟನೆಯಾಗಿ ತೆರಿಗೆ ಪಾವತಿಸಲು ನಿರಾಕರಿಸಿದ ಪ್ರಸಿದ್ಧ ಅಮೇರಿಕನ್ ಅರಾಜಕತಾವಾದಿ ಹೆನ್ರಿ ಡೇವಿಡ್ ಥೋರೋ ಅವರ ಆಲೋಚನೆಗಳು ಮತ್ತು ಚಟುವಟಿಕೆಗಳಿಂದ ಗಾಂಧೀಜಿ ಅವರು ಪ್ರಭಾವಿತರಾಗಿದ್ದರು. ಎಲ್ಲಾ ಸಂದರ್ಭಗಳಲ್ಲಿ ಆತ್ಮಸಾಕ್ಷಿಯ ಪ್ರಾಬಲ್ಯಕ್ಕಾಗಿ ಥೋರೋ ಅವರ ಮನವಿಯು ಗಾಂಧೀಜಿ ಅವರನ್ನು ತುಂಬಾ ಆಕರ್ಷಿಸಿತು. ಅವರು ತಮ್ಮ ನಿಷ್ಕ್ರೀಯ ಪ್ರತಿರೋಧದ ತಂತ್ರವು 'ನಾಗರಿಕ ಅಸಹಕಾರ'ದ ಹಿಂದಿನ ಪ್ರಬಂಧದಲ್ಲಿ ವೈಜ್ಞಾನಿಕ ದೃಢೀಕರಣವನ್ನು ಕಂಡುಕೊಂಡಿದೆ ಎಂದು ಒಪ್ಪಿಕೊಂಡರು. ಥೋರೊ ಅವರ ರಾಜಕೀಯದ ತಿರುಳು ನೈಸರ್ಗಿಕ ಅಥವಾ ಉನ್ನತ ಕಾನೂನಿನಲ್ಲಿನ ನಂಬಿಕೆಯಾಗಿತ್ತು. ವ್ಯಕ್ತಿಯ ಅತ್ಯುನ್ನತ ಜವಾಬ್ದಾರಿ ರಾಜ್ಯಕ್ಕೆ ಇರಬೇಕು ಎಂಬ ಕಲ್ಪನೆಯನ್ನು ಅವರು ತಿರಸ್ಕರಿಸಿದರು. ಭೂಮಿಯಲ್ಲಿ ನ್ಯಾಯವನ್ನು ಸ್ಥಾಪಿಸಲು ವಿಫಲವಾದ ಸರ್ಕಾರವನ್ನು ಗುರುತಿಸಲು ಅವರು ನಿರಾಕರಿಸಿದರು.

ಗಾಂಧೀಜಿ ಅವರು ಅರಾಜಕತಾವಾದಿ ದೃಷ್ಟಿಕೋನವನ್ನು ಥೋರೋ ಅವರ ಘೋಷಣೆಯಿಂದ ಸಂಪೂರ್ಣವಾಗಿ ಬೆಂಬಲಸಲಾಯಿತು. 'ಆ ಸರ್ಕಾರವು ಕನಿಷ್ಠವನ್ನು ಆಳುತ್ತದೆ'. ಈ ಭೂಮಿಯ ನಿವಾಸಿಗಳು ಆಲೋಚನೆ, ಮಾತು ಮತ್ತು ಕಾರ್ಯಗಳಲ್ಲಿ ಸತ್ಯವಂತರು ಮತ್ತು ಅಹಿಂಸಾವಾದಿಗಳಾಗಿದ್ದರೆ. ಈ ಭೂಮಿಯಲ್ಲಿ ಮುಕ್ತ ಮತ್ತು ಪ್ರಬುದ್ಧ ರಾಜ್ಯವನ್ನು ಸ್ಥಾಪಿಸಬಹುದು ಎಂದು ಗಾಂಧೀಜಿ ಅವರು ನಂಬಿದ್ದರು. ಥೋರೋ ಅವರು 1849ರಲ್ಲಿ ತಮ್ಮ ಭಾಷಣವೊಂದರಲ್ಲಿ 'ನಾಗರಿಕ ಅಸಹಕಾರ' ಎಂಬ ಪದವನ್ನು ಮೊದಲ ಬಾರಿಗೆ ಬಳಸಿದರು. ಆದಾಗ್ಯೂ, ಗಾಂಧೀಜಿ ಅವರು ತಮ್ಮ ಕಲ್ಪನೆಯನ್ನು ಥೋರೋ ಅವರ ಬರಹಗಳಿಂದ ಪಡೆದಿಲ್ಲ. ನಾನು ಥೋರೋ ಅವರ ಬರಹಗಳಿಂದ ನಾಗರಿಕ ಅಸಹಕಾರದ ಕಲ್ಪನೆಯನ್ನು ಪಡೆದುಕೊಂಡಿದ್ದೇನೆ ಎಂಬ ಹೇಳಿಕೆ ತಪ್ಪು. ದಕ್ಷಿಣ ಆಫ್ರಿಕಾದಲ್ಲಿ ಅಧಿಕಾರಕ್ಕೆ

ಪ್ರತಿರೋಧವು ಮುಂಚೆಯೇ ಮುಂದುವರೆದಿತ್ತು. ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ಗಾಂಧೀಜಿ ಅವರು ಪ್ರಶ್ನಾತೀತವಾಗಿ ಜನಾಂಗೀಯವಾದಿಯಾಗಿದ್ದರು. ಅವರು ನಾಗರೀಕತೆಗಳ ಶ್ರೇಣಿಯನ್ನು ನಂಬಿದ್ದರು, ಯುರೋಪಿಯನ್ನರು ಮೇಲ್ಭಾಗದಲ್ಲಿ, ಭಾರತೀಯರು ಅವರ ಕೆಳಗೆ ಮತ್ತು ಆಫ್ರಿಕನ್ನರು ಸಂಪೂರ್ಣವಾಗಿ ಕೆಳಭಾಗದಲ್ಲಿದ್ದಾರೆ. ಅವರು ಆಫ್ರಿಕಾದ ಸ್ಥಳೀಯ ನಿವಾಸಿಗಳ ಬಗೆಗೆ ಪೋಷಕ ಮತ್ತು ಕೀಳು ಭಾಷಯಲ್ಲಿ ಮಾತನಾಡಿದರು. ಆದಾಗ್ಯೂ, ಅವರು ಮುವತ್ತರ ವಯಸ್ಸಿನ ದಶಕದ ಮಧ್ಯದಲ್ಲಿದ್ದಾಗ, ಗಾಂಧೀಜಿ ಅವರು ಇನ್ನು ಮುಂದೆ ಆಫ್ರಿಕನ್ನರನ್ನು ಭಾರತೀಯರಿಗಿಂತ ಕೀಳು ಎಂದು ಭಾವಿಸಲಿಲ್ಲ. ನಾಗರಿಕ ಅಸಹಕಾರದ ಕುರಿತು ಥೋರೋ ಅವರ ಪ್ರಬಂಧವನ್ನು ಪಡೆದುಕೊಂಡೆ ಎಂದು ಹೇಳಿದ್ದಾರೆ. ನಮ್ಮ ಹೋರಾಟವನ್ನು ಇಂಗ್ಲಿಷ್ ಓದುಗರಿಗೆ ವಿವರಿಸಲು ನಾನು ಅವರ ಪದಗುಚ್ಛದ ಬಳಕೆಯನ್ನು ಪ್ರಾರಂಭಿಸಿದೆ. ಆದರೆ, ನಾಗರಿಕ (ಸಿವಿಲ್) ಅಸಹಕಾರ ಕೂಡ ಹೋರಾಟದ ಸಂಪೂರ್ಣ ಅರ್ಥವನ್ನು ತಿಳಿಸಲು ವಿಫಲವಾಗಿದೆ ಎಂದು ನಾನು ಕಂಡುಕೊಂಡಿದ್ದೇನೆ ಎಂದಿದ್ದಾರೆ. ಆದ್ದರಿಂದ, ನಾನು 'ನಾಗರಿಕ ಪ್ರತಿರೋಧ' ಎಂಬ ಪದಗುಚ್ಛವನ್ನು ಅಳವಡಿಸಿಕೊಂಡಿದ್ದೇನೆ ಮತ್ತು ಅಂತಿಮವಾಗಿ ಇದನ್ನು 'ಅಹಿಂಸಾತ್ಮಕ ಪ್ರತಿರೋಧ' ಎಂದು ಮಾರ್ಪಡಿಸಿದೆ. ಥೋರೋ ಒಳ್ಳೆಯತನಕ್ಕೆ ಮನುಶ್ಯನ ಸ್ವಾಭಾವಿಕ ಪ್ರಚೋದನೆಗಳನ್ನು ಬೆಂಬಲಿಸುತ್ತಿದ್ದರು. ಆತ್ಮಸಾಕ್ಷಿಯ ಎಲ್ಲಾ ಪರಿಸ್ಥಿತಿಗಳಲ್ಲಿ ಶ್ರೇಷ್ಠತೆಗಾಗಿ ಪ್ರತಿಪಾದಿಸಿದರು ಮತ್ತು ಯಾವುದೇ ಸರ್ಕಾರವ್ಲಿದೆ ಭವಿಷ್ಯದ ಸಮಾಜದ ಆದರ್ಶವನ್ನು ಹೇಗೆ ನಿರ್ಧರಿಸುವುದು.

ಥೋರೋ ಅವರ ಚಿಂತನೆಯ ಕ್ಷೇತ್ರಕ್ಕೆ ಪ್ರಾಥಮಿಕ ಕೊಡುಗೆ ಎಂದರೆ; ಅನ್ಯಾಯದ ಆಧಾರದ ಮೇಲೆ ರಾಜ್ಯವನ್ನು ವಿರೋಧಿಸುವ ಮನವಿಯಾಗಿರುತ್ತದೆ. ಮನುಷ್ಯನ ಘನತೆ ಮತ್ತು ವ್ಯಕ್ತಿಯ ಸ್ವಾತಂತ್ರ್ಯದ ನಾಯಕರಾದ ಅವರು ತಮ್ಮ ವೈಯಕ್ತಿಕ ಅಡೆತಡೆಗಳನ್ನು ಲೆಕ್ಕಸದೆ ಗುಲಾಮಗಿರಿಯ ರೂಪದಲ್ಲಿ ಶೋಷಣೆಯಿಲ್ಲದ ನ್ಯಾಯಯುತ, ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಪ್ರತಿಪಾದಿಸಿದರು. ಬಡವರ ಬಡತನವು ಶ್ರೀಮಂತರ ಐಶಾರಾಮಿ ಜೀವನಕ್ಕೆ ನೇರ ಸಂಬಂಧವಿರುವುದನ್ನು ಅವರು ಗಮನಿಸಿದ್ದರು. ಗಾಂಧೀಜಿ ಅವರ ಪ್ರಕಾರ; ಬಹುಶಃ ಕೆಲವರನ್ನು ಅನಾಗರಿಕನ ಮೇಲೆ ಬಾಹ್ಯ ಸಂದರ್ಭಗಳಲ್ಲಿ ಇರಿಸಲಾಗಿರುವ ಅನುಪಾತದಲ್ಲಿ, ಇತರರು ಅವನಿಗಿಂತ ಕೆಳಮಟ್ಟಕ್ಕೆ ಇಳಿದಿದ್ದಾರೆ ಎಂದು ಕಂಡುಕೊಳ್ಳಬಹುದು. ಒಂದು ವರ್ಗದ ಐಶಾರಾಮಿ ಮತ್ತೊಂದು ವರ್ಗದ ಅಸಡ್ಡೆಯಿಂದ ಸಮತೋನಗೊಳ್ಳುತ್ತದೆ. ಒಂದೆಡೆ ಅರಮನೆ, ಮತ್ತೊಂದೆಡೆ ಆಲೆಮನೆ ಮತ್ತು 'ಮೂಕ ಬಡವರು'. ಅಸಂಖ್ಯಾತರು ಫೇರೋಗಳ ಸಮಾಧಿಗಳೆಂದು ಕರೆಯುವ ಪಿರಮಿಡ್‌ಗಳನ್ನು ನಿರ್ಮಿಸಿದವರು ಬೆಳ್ಳುಳ್ಳಿಯನ್ನು ತಿನ್ನುತ್ತಿದ್ದರು. ಅರಮನೆಯ ಕಾರ್ಯವನ್ನು ಮುಗಿಸಿದ ಮೇಸ್ತ್ರಿ ರಾತ್ರಿಯಲ್ಲಿ ರೆಕ್ಕೆಗಾರನಷ್ಟು ಉತ್ತಮವಾದ ಗುಡಿಸಲಿಗೆ ಮರಳುತ್ತಾನೆ. ನಾಗರಿಕತೆಯ ಸಾಮಾನ್ಯ ಪುರಾವೆಗಳು ಇರುವ ದೇಶದಲ್ಲಿ,

ನಿವಾಸಿಗಳ ಅತ್ಯಂತ ದೊಡ್ಡ ದೇಹದ ಸ್ಥಿತಿಯು ಅಧಃಪತನವಾಗಿರಬಾರದು ಎಂದು ಭಾವಿಸುವುದು ತಪ್ಪು. ಅದು ಅನಾಗರಿಕರ. ಥೋರೋ ಅವರ ಸಂದೇಶವು 'ನಿನ್ನ ಕೈಯಲ್ಲಿ ಸಾಕಷ್ಟು ಇದ್ದರೆ, ಖರ್ಜೂರದ ಮರದಂತೆ ಉದಾರವಾಗಿರಿ; ಆದರೆ, ಅದು ಬಿಟ್ಟುಕೊಡು ಏನನ್ನೂ ನೀಡದಿದ್ದರೆ, ಸ್ವತಂತ್ರವಾಗಿರಿ ಎಂಬುದಾಗಿರುತ್ತದೆ.

ಪ್ರತಿಯೊಬ್ಬನೂ ತನ್ನ ದುಡಿಮೆಯಿಂದಲೇ ದುಡಿದು ಸಂಪಾದಿಸಬೇಕು ಎಂದು ಗಾಂಧೀಜಿ ಅವರು ಮನಗಂಡರು. ಆರು ವಾರಗಳ ಕಾದುಡಿದರೆ ಮಾತ್ರ ವರ್ಷಕ್ಕೆ ತನ್ನ ಆಹಾರವನ್ನು ತಾನೇ ಉತ್ಪಾದಿಸಿಕೊಳ್ಳಬಹುದು ಎಂಬ ಅವರ ಪ್ರಬಂಧವೇ ಗಳಿಕೆಯ ಸುಳಿವಾಗಿದೆ. ಗಾಂಧೀಜಿ ಅವರು ಹೀಗೆ ಬರೆದಿದ್ದಾರೆ, ಥೋರೋ ಅವರಂತಹ ಪುರುಷರು ತಮ್ಮ ವೈಯಕ್ತಿಕ ಉದಾಹರಣೆಗಳಿಂದ ಗುಲಾಮಗಿರಿಯನ್ನು ನಿರ್ಮೂಲನೆ ಮಾಡಿದರು. ಥೋರೊ ಹೇಳುತ್ತಾರೆ. ಈ ಮ್ಯಾಸಚೂಸೆಟ್ಸ್ ರಾಜ್ಯದಲ್ಲಿ ಗುಲಾಮರನ್ನು ಹಿಡಿದಿಟ್ಟುಕೊಳ್ಳುವುದನ್ನು ನಿಲ್ಲಿಸಿದರೆ ಒಂದು ಸಾವಿರ, ನೂರಾದರೆ, ನಾನು ಹೆಸರಿಸಬಹುದಾದ ಹತ್ತು ಪುರುಷರು, ಹತ್ತು ಪ್ರಾಮಾಣಿಕರು ಮಾತ್ರ, ಒಬ್ಬ ಪ್ರಾಮಾಣಿಕ ವ್ಯಕ್ತಿ, ಗುಲಾಮರನ್ನು ಹಿಡಿದಿಟ್ಟುಕೊಳ್ಳುವುದನ್ನು ನಿಲ್ಲಿಸಿದರೆ; ಅದು ನಿಜವಾಗಿಯೂ ಹಿಂದೆ ಸರಿಯುತ್ತದೆ ಎಂದು ನನಗೆ ಚೆನ್ನಾಗಿ ತಿಳಿದಿದೆ. ಈ ಸಹ–ಪಾಲುದಾರಿಕೆ ಮತ್ತು ದೇಶದ ಜೈಲಿನಲ್ಲಿ ಬಂಧಿಸಲಾಯಿತು. ಆದ್ದರಿಂದ, ಇದು ಅಮೇರಿಕಾದಲ್ಲಿ ಗುಲಾಮಗಿರಿಯ ನಿರ್ಮೂಲನೆ ಎಂದು ತಿಳಿಯಬೇಕು. ಏಕೆಂದರೆ ಪ್ರಾರಂಭವು ಎಷ್ಟು ಚಿಕ್ಕದಾಗಿದೆ ಎಂಬುದು ಮುಖ್ಯವಾಗಿಲ್ಲ. ಒಮ್ಮೆ ಉತ್ತಮವಾಗಿ ಮಾಡ್ಪಟ್ಟದ್ದನ್ನು ಶಾಶ್ವತವಾಗಿ ಮಾಡಲಾಗುತ್ತದೆ. ಮತ್ತೆ ಮುಂದುವರೆದು, ನಾನು ಅಪರಾಧಿಯ ಸರಕುಗಳನ್ನು ವಶಪಡಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಜೈಲುವಾಸವನ್ನು ಆಲೋಚಿಸಿದ್ದೇನೆ. ಆದರೂ ಎರಡೂ ಒಂದೇ ಉದ್ದೇಶವನ್ನು ಪೂರೈಸುತ್ತವೆ. ಏಕೆಂದರೆ; ಅವರು ಶುದ್ಧ ಹಕ್ಕನ್ನು ಪ್ರತಿಪಾದಿಸುತ್ತಾರೆ ಮತ್ತು ಪರಿಣಾಮವಾಗಿ ಭ್ರಷ್ಟಾ ರಾಜ್ಯಕ್ಕೆ ಅತ್ಯಂತ ಅಪಾಯಕಾರಿ ಕಾಣುತ್ತಾರೆ. ಆಸ್ತಿಯನ್ನು ಸಂಗ್ರಹಿಸುವಲ್ಲಿ ಅವರು ಸಾಮಾನ್ಯವಾಗಿ ಹೆಚ್ಚು ಸಮಯ ಕಳೆಯುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೀಗೆ, ಗಾಂಧೀಜಿ ಅವರ ವ್ಯಕ್ತಿತ್ವ ವಿಕಾಸದಲ್ಲಿ ಪ್ರಭಾವಿಸಿದ ವ್ಯಕ್ತಿಗಳು ಮತ್ತು ಚಾರಿತ್ರಿಕ ಅಂಶಗಳಾಗಿವೆ.

## ಗ್ರಂಥಸೂಚಿ

1. ನಂದನ.ಬಿ. ಮಹಾತ್ಮಾ ಗಾಂಧೀಜಿ ಅವರ ಚಿಂತನೆಯಲ್ಲಿ ಸಾಮಾಜಿಕ ನ್ಯಾಯ
2. ಸಿದ್ಧನವಳ್ಳಿ ಕೃಷ್ಣಶರ್ಮ ಮತ್ತು ನಿಲತ್ತಹಳ್ಳಿ ಕಸ್ತೂರಿ, ಮಹಾತ್ಮಾ ಗಾಂಧೀಜಿಯವರ ಆಯ್ದ ಕೃತಿಗಳು, ಸಂಪುಟ–4
3. ಗಾಂಧೀ.ಎಂ.ಕೆ, ಆತ್ಮ ಚರಿತ್ರೆ, 1940
4. ಗಾಂಧೀ.ಎಂ.ಕೆ, ಗೋಖಲೆ ನನ್ನ ರಾಜಕೀಯ ಗುರು
5. ತಿಪ್ಪೆರುದ್ರಸ್ವಾಮಿ.ಎಚ್. (ಸಂ), ಗಾಂಧಿ ವಿಚಾರ ಮಾರ್ಗ
6. Earnest Barker, Political Thought from spencer to Today
7. John Ruskin, Unto This Last
8. Leo Tolstoy, The Kingdom of God is Within You, Oxford